ದಿನಾಂಕ: 12-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಕೆ ಎಲ್ ಎನ್ ವಕೀಲರಿಂದ ಪಿರ್ಯಾದಿ ಪರವಾಗಿಃ

6) ನಾನು ಶಿಕ್ಷಕನಾಗುವ ಪೂರ್ವದಲ್ಲಿ ಟಿ ಎ ಪಿ ಸಿ ಎಂ ಎಸ್ ನಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡುತ್ತಿದ್ದೆ. 1996/-97 ರಲ್ಲಿ ಕ್ಲರ್ಕ್ ಆಗಿ ಕೆಲಸ ಮಾಡಿರುತ್ತೇನೆ. ನನ್ನ ಸ್ವಂತ ಮನೆ ಬೇಲೂರಿನ ಪಂಪ್ ಹೌಸ್ ರಸ್ತೆಯಲ್ಲಿ ಇರುತ್ತದೆ ಎನ್ನುವುದು ಸರಿ. ಸದರಿ ಪಂಪ್ ಹೌಸ್ ರಸ್ತೆ ಮನೆಯಲ್ಲಿ 2004 ರಿಂದ 2005 ರವರೆಗೆ ಇದ್ದೆ. ಪಂಪ್ ಹೌಸ್ ರಸ್ತೆಯಲ್ಲಿರುವ ಮನೆಯನ್ನು ಬಿಟ್ಟು ನಾನು 21 ವರ್ಷಗಳಾಗಿರುತ್ತದೆ.

7) ಪಿರ್ಯಾದಿಯ ಪರಿಚಯ ಇರುವುದಿಲ್ಲ. ಹಾಸನದ ಡಿ ಸಿ ಸಿ ಬ್ಯಾಂಕಿನಲ್ಲಿ ನಿಡಿ 6 ರಂತೆ ನನ್ನ ಖಾತೆ ಇರುತ್ತದೆ ಎಂದರೆ ಸರಿ. ನನ್ನ ಖಾತೆಯಲ್ಲಿ ಆಗಿರುವ ಹಣದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಡಿ 6 ರಲ್ಲಿ ದಿಃ 28-10-2014 ರಂದು ನಿಮ್ಮ ಖಾತೆಯಿಂದ ಹಣ ಡ್ರಾ ಮಾಡಿರುವ ಬಗ್ಗೆ ಗೊತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಈ ಕೇಸನ್ನು ಹಾಕಿದ ನಂತರ ಗೊತ್ತಾಯಿತು ಎಂದು ನುಡಿಯುತ್ತಾರೆ. ಈ ರೀತಿ ನೋಡಿದ ಸಮಯದಲ್ಲಿ ಎಂ ಆರ್ ರವಿ ಮತ್ತು ಚಂದ್ರೇಗೌಡರಿಗೆ ಹಣ ಜಮೆಯಾಗಿರುವ ವಿಚಾರ ತಿಳಿಯಿತು. ಎಂ ಆರ್ ರವಿ ಯವರಿಗೆ ರೂ.2,50,000/- ಲಕ್ಷ ಜಮೆ ಆಗಿತ್ತು. ಸದರಿ ಹಣ ಕಡಿತಗೊಂಡ ಬಗ್ಗೆ ಏನಾದರೂ ವಿಚಾರಣೆ ಮಾಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಾನು ಚೆಕ್ ಗಳನ್ನು ನನ್ನ ಅಕ್ಕನ ಮಗನಾದ ಯೋಗೇಶ್ ಗೆ ಕೊಟ್ಟಿದ್ದೆ, ಹಾಗಾಗಿ ನಾನು ವಿಚಾರಣೆ ಮಾಡಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮೊತ್ತವನ್ನು ಬರೆದು, ಹೆಸರನ್ನು ಖಾಲಿ ಬಿಟ್ಟು ಚೆಕ್ ಗಳನ್ನು ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಸದರಿ 2 ಚೆಕ್ ಗಳನ್ನೆ ಎಂ ಆರ್ ರವಿ ಮತ್ತು ಚಂದ್ರೇಗೌಡರು ನಗದೀಕರಣ ಮಾಡಿಕೊಂಡಿರುತ್ತಾರೆ.

8) ಹೊನ್ನೇಗೌಡರಿಗೆ ನಿಡಿ 6 ರಲ್ಲಿ ತೋರಿಸಿರುವಂತೆ ಚೆಕ್ ನ್ನು ಕೊಟ್ಟಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಕ್ಕನ ಮಗ ನನಗೆ ಹೆಸರು ಬರೆಯಬೇಡ ಮಾಮ ಎಂದು ಹೇಳಿ ಚೆಕ್ ಗಳನ್ನು ಪಡೆದಿದ್ದ, ನ್ಯಾಯಾಲಯಕ್ಕೆ ಬಂದಾಗಲೇ ನನಗೆ ಅಕ್ಕನ ಮಗ ಚೆಕ್ ನ್ನು ಯಾರು ಯಾರಿಗೆ ಕೊಟ್ಟಿದ್ದ ಎಂದು ತಿಳಿಯಿತು. ನ್ಯಾಯಾಲಯಕ್ಕೆ ಬಂದ ನಂತರವಾದರೂ ನಿಮ್ಮ ಅಕ್ಕನ ಮಗನಿಗೆ ಚೆಕ್ ನ್ನು ಯಾರು ಯಾರಿಗೆ ಕೊಟ್ಟಿದ್ದೀಯಾ

ಎಂದು ಕೇಳಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ನಾನು ಇಲ್ಲಿಯವರೆಗೆ ಕೇಳಿಲ್ಲ ಎಂದು ನುಡಿಯುತ್ತಾರೆ.

9) ದಿಃ 15-11-2016 ರಂದು ಬ್ಯಾಂಕಿಗೆ ಚೆಕ್ ಗಳನ್ನು ಸ್ಟಾಪ್ ಪೇಮೆಂಟ್ ಮಾಡುವಂತೆ ಅರ್ಜಿ ಕೊಟ್ಟಿದ್ದೀರಾ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ಪ್ರತಿ ನಿಮ್ಮ ಹತ್ತಿರ ಇದೆಯಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಹೌದು ಇದೆ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಚೆಕ್ ಕಳೆದು ಹೋದ ದಿನವೇ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆ ದಿನ ಕೊಡಲಿಲ್ಲ ತಡವಾಗಿ ದೂರು ಕೊಟ್ಟೆ ಎಂದು ನುಡಿಯುತ್ತಾರೆ. ಯಾವಾಗ ದೂರು ಕೊಟ್ಟಿರುತ್ತೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ದಿಃ 23-02-2018 ರಂದು ದೂರು ಕೊಟ್ಟೆ ಎಂದು ನುಡಿಯುತ್ತಾರೆ.

10) ಚೆಕ್ ಯಾವಾಗ ಕಳೆದು ಹೋಗಿರುತ್ತದೆ ಎಂದು ಬ್ಯಾಂಕಿಗೆ ದೂರು ಕೊಟ್ಟಿರುತ್ತೀರಿ ಎಂದು ಪ್ರಶ್ನಿಸಲಾಗಿ ಸಾಕ್ಷಿ ದಿ 08-11-2016 ರಂದು ಚೆಕ್ ಕಳೆದು ಹೋಗಿದೆ ಎಂದು ದೂರು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಬ್ಯಾಂಕಿಗೆ ಚೆಕ್ ಕಳೆದು ಹೋಗಿದೆ ಎಂದುಅರ್ಜಿ ನೀಡಿದ ದಿನವೇ ಪೊಲೀಸರಿಗೆ ದೂರು ಕೊಡಲು ತೊಂದರೆ ಇತ್ತಾ ಎಂದು ಜ್ಞಾಪಕ ಬಂತು ಎಂದು ಪ್ರಶ್ನಿಸಲಾಗಿ ಸಾಕ್ಷಿ ನನಗೆ ಯಾರೋ ಹೇಳಿದರು ಆವಾಗ ಠಾಣೆಗೆ ದೂರು ನೀಡಿದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಲಾಯಿತು. ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .